T.No:862/21-22

Office of the Commissioner of Commercial Taxes, Bengaluru-9
31 AUG 2021
G.L. No: 779
D.C.C.T.

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ), ವಿ.ಸ & ಸೇ.ತೆ ಕಛೇರಿ-2, ಬೆಂಗಳೂರು ರವರ ನಡಾವಳಿಗಳು**

ಪ್ರಸ್ತುತ:- ರಾಮನ್,ಕೆ
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು. (ಆಡಳಿತ),
ವಿ.ಸ & ಸೇ.ತೆ ಕಛೇರಿ-2, ಬೆಂಗಳೂರು.

ವಿಷಯ:- 2021-22ನೇ ಸಾಲಿಗೆ ವಾಣಿಜ್ಯ ತೆರಿಗೆಗಳ ಜಂಟಿ ಅಯುಕ್ತರ ಕಛೇರಿ (ಆಡಳಿತ) ವಿ.ಸ&ಸೇ.ತೆ.ಕ-2 ಬೆಂಗಳೂರು, ವಿಭಾಗಕ್ಕೆ ಸಾಮಾನ್ಯ ಟಂಡರ್ ಪ್ರಕ್ರಿಯೆ ಮೂಲಕ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದುಕೊಳ್ಳುವ ಕುರಿತು.

ಉಲ್ಲೇಖ:- 01 ಮಾನ್ಯ ವಾಣಿಜ್ಯ ತೆರಿಗೆಗಳ ಅಯುಕ್ತರ ಪತ್ರ ಸಂಖ್ಯೆ:ವಿ.ಹೆಚ್.ಟಿ/ಸಿ.ಆರ್-07/18-19 ದಿನಾಂಕ: 19-07-2021

02 ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ:ವಾತೆಜಂಆ(ಆ)/ವಿ.ಸ&ಸೇ.ತೆ.ಕ-2/ವಾಹನ/ಸಿ.ಆರ್-01/2021-22 ದಿನಾಂಕ:-23-07-2021

03 ಈ ಕಛೇರಿಯ ಕಛೇರಿ ಆದೇಶ ಸಂಖ್ಯೆ:ವಾತೆಜಂಆ(ಆ)/ವಿ.ಸ&ಸೇ.ತೆ.ಕ-2/ವಾಹನ/ಸಿ.ಆರ್-01/2021-22 ದಿನಾಂಕ:-26-07-2021

04 ಟೆಂಡರ್ ಪರಿಶೀಲನಾ ಸಮಿತಿ ರವರ ಪತ್ರ ಸಂಖ್ಯೆ:ವಾತೆಅ(ಲೆ.ಪ)2.1/21.22 ದಿನಾಂಕ:25-08-21

eq-4

*********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ 2021-22ನೇ ಸಾಲಿಗೆ ವಾಣಿಜ್ಯ ತೆರಿಗೆಗಳ ಜಂಟಿ ಅಯುಕ್ತರ ಕಛೇರಿ (ಆಡಳಿತ) ವಿ.ಸ&ಸೇ.ತೆ.ಕ-2 ಬೆಂಗಳೂರು, ವಿಭಾಗಕ್ಕೆ 07 ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ದಿನಾಂಕ: 01-09-2021 ರಿಂದ 31-08-2022ರ ಅವಧಿಗೆ, ಸಾಂಪ್ರಾದಾಯಿಕ ಟೆಂಡರ್ ಪ್ರಕ್ರಿಯೆ ಮೂಲಕ ಕೆ.ಟಿ.ಪಿ.ಪಿ ಕಾಯ್ದೆಗೆ ಅನುಗುಣವಾಗಿ ಬಾಡಿಗೆಗೆ ಪಡೆದುಕೊಳ್ಳಲು ಉಲ್ಲೇಖ (1)ರನ್ವಯ ಅನುಮತಿ ನೀಡಲಾಗಿರುತ್ತದೆ. ಅದರಂತೆ ದಿನಾಂಕ: 23-07-2021 ರಂದು ಉಲ್ಲೇಖ(2) ರನ್ವಯ ಟೆಂಡರ್ ಅಧಿಸೂಚನೆಯನ್ನು ಹೊರಡಿಸಿ ಈ ಕಛೇರಿಯ ಸೂಚನಾಫಲಕ, ಇಲಾಖಾ ಜಾಲತಾಣ http://ctax.kar.nic.in ಮತ್ತು ದಿನಾಂಕ: 06-08-2021ರ ರಾಜ್ಯ ಮಟ್ಟದ ದಿನಪತ್ರಿಕೆ ಕನ್ನಡಪ್ರಭ ಪತ್ರಿಕೆಯಲ್ಲಿಯು ಸಹ, ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿ ವಿವರಗಳು, ಹಾಗೂ ಷರತ್ತು ಮತ್ತು ನಿಬಂಧನೆಗಳೊಂದಿಗೆ ಪ್ರಕಟಣೆ ಹೊರಡಿಸಿ ದಿನಾಂಕ;21-08-2021ರ ಸಂಜೆ 5.00 ಗಂಟೆಯೊಳಗೆ ಮುಚ್ಚಿದ ಲಕೋಟೆಯಲ್ಲಿ ಈ ಕಛೇರಿಗೆ ಸಲ್ಲಿಸುವಂತೆ ಪ್ರಕಟಣೆ ಹೊರಡಿಸಲಾಗಿತ್ತು.

ಮುಂದುವರೆದು, ಟೆಂಡರ್ ಅಧಿಸೂಚನೆ ಹೊರಡಿಸಿದ ನಂತರ ದಿನಾಂಕ: 21-08-2021ರ ಸಂಜೆ 5.00 ಗಂಟೆಯೊಳಗೆ ಒಟ್ಟು 17 ಅರ್ಜಿಗಳು ಸಲ್ಲಿಕೆಯಾಗಿದ್ದು, ಸಲ್ಲಿಕೆಯಾದ ಎಲ್ಲಾ ಅರ್ಜಿಗಳನ್ನು ಈ ವಿಭಾಗದ ಟೆಂಡರ್ ಪರಿಶೀಲನಾ ಸಮಿತಿಗೆ ಹಸ್ತಾಂತರಿಸಿ, ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಈ ವಿಭಾಗಕ್ಕೆ ಮಂಜೂರಾಗಿರುವ 07 ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಅಯ್ಕೆ ಮಾಡುವಂತೆ ಟೆಂಡರ್ ಪರಿಶೀಲನಾ ಸಮಿತಿಯವರಿಗೆ ಸೂಚಿಸಲಾಗಿತ್ತು.